ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ ,ಮಲ್ಲತ್ತಹಳ್ಳಿ, ಬೆಂಗಳೂರು-560056 ದೂ: 080-23183311/ 23183312 Email:kbbpbengaluru@ka.gov.in

ಕುಭಾಪ್ರಾ/23 /ಅಂತ.ಕನ್ನಡ.ತರಬೇತಿ/2021-22 ದಿನಾಂಕ: 16.08.2021

## ಪ್ರಕಟಣೆ

## ಅಂತರಜಾಲದ ಬರವಣಿಗೆಯಲ್ಲಿ ಹಾಗೂ ಅನುವಾದ

1. ಅಂತರಜಾಲದಲ್ಲಿ ಕನ್ನಡ- ತರಬೇತಿ- ಪ್ರತಿ ಜಿಲ್ಲೆಯಲ್ಲಿ ತಲಾ ಎರಡು ದಿನಗಳ ತರಬೇತಿ.
2. ನಿಯೋಜಿತರಾದ ಸಂಪನ್ಮೂಲ ವ್ಯಕ್ತಿಗಳು ಪ್ರಾಧಿಕಾರದ ಸೂಚನೆಯಂತೆ ಅಭ್ಯರ್ಥಿಗಳನ್ನು ನಿರ್ದಿಷ್ಟ ರೀತಿಯಲ್ಲಿ ಅಗತ್ಯ ಪರೀಕ್ಷೆ /ಸಂದರ್ಶನ/ಅಸೈನ್ ಮೆಂಟ್ ಗಳ ಮೂಲಕ ಆಯ್ಕೆ ಮಾಡುವುದು, ಬರಹಗಳ ಮೌಲ್ಯಮಾಪನ ಮಾಡುವುದು, ತರಬೇತಿಗಾಗಿ ಸೂಕ್ತ ಗಣಕ ಕೇಂದ್ರಗಳನ್ನು ವ್ಯವಸ್ಥೆ ಮಾಡಿಕೊಳ್ಳುವುದು, ಅಗತ್ಯ ಪ್ರಾಯೋಗಿಕ ತರಬೇತಿ ನೀಡುವುದು ಇತ್ಯಾದಿ ಜವಾಬ್ದಾರಿಯನ್ನುಹೊಂದಿರುತ್ತಾರೆ.
3. ಕಂಪ್ಯೂಟರ್ ಕೇಂದ್ರಗಳಲ್ಲಿ/ಪ್ರಯೋಗಾಲಯಗಳಲ್ಲಿ ತರಬೇತಿ ನಡೆಯಬೇಕಾಗಿದ್ದು, ಕಂಪ್ಯೂಟರ್/ ಇಂಟರ್ ನೆಟ್ ಇತ್ಯಾದಿ ವೆಚ್ಚಗಳಿಗಾಗಿ ಅಭ್ಯರ್ಥಿಗಳು ರೂ. 1000/- ಶುಲ್ಕವನ್ನು ಸ್ಥಳೀಯವಾಗಿ ಸಂಬಂಧಿಸಿದ ಕೇಂದ್ರಗಳಿಗೆ ನೇರವಾಗಿ ಪಾವತಿಸಬೇಕಾಗುತ್ತದೆ. ಈ ಸಂಬಂಧ ಆಯಾ ಜಿಲ್ಲಾವಾರು ಸ್ವೀಕೃತವಾಗುವ ಅರ್ಜಿಯನ್ನು ಆಧರಿಸಿ ಕಂಪ್ಯೂಟರ್ ಕೇಂದ್ರಗಳ ಮಾಹಿತಿಯನ್ನು ಅರ್ಜಿ ಸಲ್ಲಿಸುವ ಶಿಬಿರಾರ್ಥಿಗಳಿಗೆ ನಂತರ ತಿಳಿಸಲಾಗುವುದು. ಶಿಬಿರಾರ್ಥಿಗಳ ಶುಲ್ಕ ಪಾವತಿಸಿದ ಬಗ್ಗೆ ಕಂಪ್ಯೂಟರ್ ಕೇಂದ್ರಗಳು ನೀಡುವ ಮಾಹಿತಿಯನ್ನು ಆಧರಿಸಿ ಆಯ್ಕೆ ಪತ್ರವನ್ನು ಶಿಬಿರಾರ್ಥಿಗಳಿಗೆ ತಿಳಿಸಲಾಗುವುದು
4. ಪ್ರತಿ ತರಬೇತಿಯಲ್ಲಿ ಕನಿಷ್ಠ ಹದಿನೈದು ಹಾಗೂ ಗರಿಷ್ಠ ಮೂವತ್ತು ಅಭ್ಯರ್ಥಿಗಳು ಮಾತ್ರ.
5. ಅಭ್ಯರ್ಥಿಗಳಿಗೆ 2 ದಿನಗಳಿಗೆ- ತಲಾ ರೂ. 1000/- ಸ್ಟೈಪೆಂಡ್ ಪಾವತಿ ಮಾಡಲಾಗುವುದು. ಕಡ್ಡಾಯವಾಗಿ 2 ದಿನ ಹಾಜರಾತಿ ಇದ್ದವರಿಗೆ ಮಾತ್ರ ಸ್ಟೈಪೆಂಡ್ ಪಾವತಿ ಮಾಡಲಾಗುವುದು
6. ಅಂತಿಮವಾಗಿ ಆಯ್ಕೆಯಾಗುವ ಲೇಖನಗಳಿಗೆ ಲೇಖನಕ್ಕೆ ರೂ. 500/- ರಂತೆ ಗೌರವ ಧನ ಪಾವತಿಸುವುದು. (ಪ್ರತಿ ಶಿಬಿರಾರ್ಥಿಗೆ ಗರಿಷ್ಠ 2 ಲೇಖನಗಳಿಗೆ ಮಾತ್ರ ಅವಕಾಶ)
7. ಪ್ರತಿ ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಲ್ಲಿ ಮೂರು ಅತ್ಯುತ್ತಮ ಬರಹಗಳ ಆಧಾರದಲ್ಲಿ ಮೌಲ್ಯಮಾಪಕರ ಶಿಫಾರಸಿನಂತೆ ನಗದುಬಹುಮಾನ: ರೂ. 3000/-, 2000/-, 1000/-ದಂತೆ ನೀಡುವುದು.
8. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ಶಿಬಿರಾರ್ಥಿಗಳಿಗೆ ಪ್ರಾಧಿಕಾರದಿಂದ ಪ್ರಮಾಣಪತ್ರವನ್ನು ನೀಡುವುದು.

ಅರ್ಜಿ ಹಾಗು ಹೆಚ್ಚಿನ ವಿವರಗಳಿಗೆ ಪ್ರಾಧಿಕಾರದ ಈ ಕೆಳಕಂಡ ಕಚೇರಿ ವಿಳಾಸಕ್ಕೆ ಕಚೇರಿ ವೇಳೆಯಲ್ಲಿ ಹಾಗೂ ಅಂತರ್ಜಾಲ ತಾಣ https://kuvempubhashabharathi.karnataka.gov.in/ ಸಂಪರ್ಕಿಸಬೇಕಾಗಿ ಕೋರಿದೆ. ರಿಜಿಸ್ಟ್ರಾರ್ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಜ್ಞಾನಭಾರತಿ , ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ ಮಲ್ಲತ್ತಹಳ್ಳಿ, ಬೆಂಗಳೂರು-560056 ದೂ: 080-23183311/ 23183312 Email:kbbp-bengaluru@ka.gov.in

ರಿಜಿಸ್ಟ್ರಾರ್

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು